# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ಪಡಿಯಪ್ಪ ಮಾದರ | ಪ್ರಾ.ಸಾ-5 |
| ತಾಯಿ ಹೆಸರು | : | ಬಸವ್ವ | ಚಾಸಾ-5 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಕೂಲಿ | |
| ವಿಳಾಸ | : | ಮಹಾಂತಪುರ | |

ದಿಃ 16.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಸುಮಾರು ಎರಡು ವರ್ಷಗಳ ಹಿಂದೆ ನಮ್ಮ ಊರಾದ ಮಹಾಂತಪೂರಕ್ಕೆ ಪೊಲೀಸರು ಬೆಳಿಗ್ಗೆ 6-30 ಗಂಟೆಗೆ ಬಂದಿದ್ದರು. ಆ ಸಮಯದಲ್ಲಿ ನಮ್ಮ ಗ್ರಾಮಸ್ಥರೆಲ್ಲರೂ ಸೇರಿದ್ದೆವು. ಆ ಸಮಯದಲ್ಲಿ ಪೊಲೀಸರು ನನ್ನನ್ನು ಮತ್ತು ಚಾಸಾ-4 ರವರನ್ನು ಪಂಚಸಾಕ್ಷಿಯಾಗಬೇಕು ಎಂದು ಇಲಕಲ್ಲ ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿದ್ದರು. ಇಲಕಲ್ಲ ಪೊಲೀಸ ಠಾಣೆಯಲ್ಲಿ ನಮ್ಮನ್ನು ಸಿಪಿಐ ರವರಿಗೆ ಭೇಟಿ ಮಾಡಿಸಲಾಯಿತು. ಪೊಲೀಸ ಠಾಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ತೋರಿಸಿ, ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ಅವರ ಜೊತೆಯಲ್ಲಿ ಕರೆದುಕೊಂಡು ಹೋಗಿ ಕೆಲವು ಸ್ಥಳಗಳನ್ನು ತೋರಿಸುತ್ತಾರೆ, ಸದರಿ ಸ್ಥಳಗಳನ್ನು ತೋರಿಸಿದ ಸಮಯದಲ್ಲಿ ನಾವು ಪಂಚಸಾಕ್ಷಿಗಳಾಗಿ ಸಹಕರಿಸಬೇಕೆಂದು ಕೇಳಿಕೊಂಡಿದ್ದು ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ.

2. ನಂತರ ಪೊಲೀಸ ಇಲಾಖಾ ವಾಹನದಲ್ಲಿ ನಮ್ಮನ್ನು, ಆರೋಪಿತರನ್ನು ಮತ್ತು ಸಿಪಿಐ ಹಾಗೂ ಅವರ ಸಿಬ್ಬಂದಿಯನ್ನು ರಾಷ್ಟ್ರೀಯ ಹೆದ್ದಾರಿ ಮೇಲೆ ಇರುವ ತೊಂಡಿಹಾಳ ಬ್ರಿಡ್ಜ ಹತ್ತಿರ ಕರೆದುಕೊಂಡು ಹೋಗಿ ಶಾಂತಪ್ಪನಿಗೆ ಸೇರಿದ ಮೊಬೈಲ್ ಸಿಮ್ ನ್ನು ಇದೇ

ಸ್ಥಳದಲ್ಲಿ ಎಸೆದಿರುತ್ತೇವೆ ಎಂದು ಹೇಳಿ 1, 3 ರಿಂದ 5 ನೇ ಆರೋಪಿತರು ತಿಳಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು ಮೊಬೈಲ ಸಿಮ್ ಹುಡುಕಿರುತ್ತಾರೆ, ಆದರೆ ಸ್ಥಳದಲ್ಲಿ ಯಾವುದೇ ಸಿಮ್ ಸಿಕ್ಕಿರುವುದಿಲ್ಲ. ಈ ವಿಚಾರವಾಗಿ ಸದರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಅದಕ್ಕೆ ನನ್ನ ಮತ್ತು ಚಾಸಾ-4 ರವರ ಸಹಿ ಪಡೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-12 ಎಂದು, ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಎರಡು ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಶಾನೆ ಪಿ-13 ಎಂದು ಗುರುತಿಸಲಾಯಿತು.

3. ನಂತರ ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ಇಲಾಖಾ ವಾಹನದಲ್ಲಿ ಗೋಪಶಾನಿ ಹಳ್ಳದ ಬಳಿ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಕೊಡಲಿ, ಮೃತನ ಮೊಬೈಲ, 1 ಮತ್ತು 2 ನೇ ಆರೋಪಿತರ ಬಟ್ಟೆಗಳನ್ನು ಎಸೆದಿರುವ ಸ್ಥಳ ಎಂದು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು ಪರಿಶೀಲಿಸಿದಾಗ ಒಂದು ಕೊಡಲಿ ಮಾತ್ರ ಸ್ಥಳದಲ್ಲಿ ಸಿಕ್ಕಿರುತ್ತದೆ. ಸದರಿ ವಿಚಾರವಾಗಿ ನಮ್ಮ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಅದಕ್ಕೆ ನನ್ನ ಮತ್ತು ಚಾಸಾ-4 ರವರ ಸಹಿ ಪಡೆದುಕೊಳ್ಳಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-14 ಎಂದು, ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಒಂದು ಭಾವಚಿತ್ರ ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-15 ಎಂದು ಗುರುತಿಸಲಾಯಿತು. ನಿಪಿ-14 ಪಂಚನಾಮೆಯಡಿಯಲ್ಲಿ ಜಪ್ತಿ ಪಡಿಸಿಕೊಂಡ ಕೊಡಲಿಯನ್ನು ನೋಡಿದರೆ ಗುರುತಿಸಬಲ್ಲೆ, ಸಾಕ್ಷಿ ನ್ಯಾಯಾಲಯದ ಮುಂದಿರುವ ಕೊಡಲಿ ನೋಡಿ ಗುರುತಿಸಿದ್ದು ಅದನ್ನು ಮು ಮಾಲು-3 ಎಂದು ಗುರುತಿಸಲಾಯಿತು.

4. ನಂತರ ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ಇಲಾಖಾ ವಾಹನದಲ್ಲಿ ತುಂಬ ಗ್ರಾಮದಲ್ಲಿರುವ ಚಾಸಾ-19/ಶಿವಕುಮಾರ ರವರ ಮನೆಯ ಹತ್ತಿರ ಕರೆದುಕೊಂಡು ಹೋಗಿ ಮನೆಯ ಮುಂದೆ ನಿಲ್ಲಿಸಿದ್ದ ಒಮಿನಿ ವಾಹನವನ್ನು ತೋರಿಸಿ ಇದೇ ವಾಹನದಲ್ಲಿ ಮೃತದೇಹವನ್ನು ಸಾಗಿಸಿದ ವಾಹನ ಎಂದು ತೋರಿಸಿರುತ್ತಾರೆ. ನಂತರ ನಮ್ಮ ಸಮಕ್ಷಮ ಪೊಲೀಸರು ಸದರಿ ಒಮಿನಿ ವಾಹನದ ಡಿಕ್ಕಿಯನ್ನು ತೆಗೆದು ಪರಿಶೀಲಿಸಿದಾಗ ಎರಡು ಸೌಂಡಬಾಕ್ಸ ಇದ್ದು ಅವುಗಳ ಮೇಲೆ ರಕ್ತದ ಕಲೆಗಳು ಕಂಡುಬಂತು. ನಂತರ ಪೊಲೀಸರು ನನ್ನ ಮತ್ತು ಚಾಸಾ-4 ರವರ ಸಮಕ್ಷಮ ವಾಹನವನ್ನು ಮತ್ತು ವಾಹನದಲ್ಲಿದ್ದ ಸೌಂಡಬಾಕ್ಸ ನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಜಪ್ತಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ನಾಲ್ಕು ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಒಟ್ಟಾಗಿ ನಿಶಾನೆ ಪಿ-17 ಎಂದು ಗುರುತಿಸಲಾಯಿತು. ಪೊಲೀಸರು ನಮ್ಮ ಸಮಕ್ಷಮ ಜಪ್ತಿ ಪಡಿಸಿಕೊಂಡ ಸೌಂಡ ಬಾಕ್ಸಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಎರಡು ಸೌಂಡಬಾಕ್ಸಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು ಮಾಲು-4 ಎಂದು ಗುರುತಿಸಲಾಯಿತು. ನಿಪಿ-16 ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡ ಒಮಿನಿ ವಾಹನ ಭಾವಚಿತ್ರದಲ್ಲಿಕಂಡುಬರುತ್ತಿದೆ.

5. ನಂತರ 5 ನೇ ಆರೋಪಿ/ಹನಮಂತ ನಮ್ಮನ್ನು ಹಾಗೂ ಪೊಲೀಸರನ್ನು ತುಂಬ ಗ್ರಾಮದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ, ಮನೆಯ ಬೆಡರೂಂನಲ್ಲಿಟಿಟ್ಟದ್ದ ಒಂದು ಪ್ಯಾಂಟ ಮತ್ತು ಒಂದು ಶರ್ಟನ್ನು ಹಾಜರುಪಡಿಸಿದ್ದು ಅದನ್ನು ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆಯಡಿಯಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-18 ಎಂದು, ಸಾಕ್ಷಿ

ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಎರಡು ಭಾವಚಿತ್ರ ಗಳನ್ನು ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-19 ಎಂದು ಗುರುತಿಸಲಾಯಿತು. ನಿಪಿ-18 ಪಂಚನಾಮೆಯಡಿಯಲ್ಲಿ ಜಪ್ತಿ ಪಡಿಸಿಕೊಂಡ ಪ್ಯಾಂಟ ಮತ್ತು ಶರ್ಟನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಶರ್ಟ ಮತ್ತು ಪ್ಯಾಂಟ ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾಲು-5 ಮತ್ತು 6 ಎಂದು ಗುರುತಿಸಲಾಯಿತು.

6. ನಂತರ ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ನಮ್ಮ ಊರಾದ ಮಹಾಂತಪುರಕ್ಕೆ ಕರೆದುಕೊಂಡು ಹೋಗಿ, ಯಲ್ಲವ್ವ ಅನ್ನುವವರ ಮನೆಯ ಪಕ್ಕ ಕರೆದುಕೊಂಡು ಹೋಗಿ 1 ನೇ ಆರೋಪಿ/ಬಸವರಾಜ ನಮ್ಮನ್ನು ಸದರಿ ಸ್ಥಳದ ಬಳಿ ಇದ್ದ ಮುಳ್ಳು ಗಿಡಗಳ ಮಧ್ಯದಲ್ಲಿ ತಾನು ಎಸೆದಿರುವ ಒಂದು ಜಾಕೇಟನ್ನು ತೋರಿಸಿ, ತೆಗೆದು ಹಾಜರುಪಡಿಸಿದ್ದು ಅದನ್ನು ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಳ್ಳಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-20 ಎಂದು, ಸಾಕ್ಷಿ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಎರಡು ಭಾವಚಿತ್ರ ಗಳನ್ನು ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರ ಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಶಾನೆ ಪಿ-21 ಎಂದು ಗುರುತಿಸಲಾಯಿತು. ನಿಪಿ-20 ರಡಿಯಲ್ಲಿ ಜಪ್ತಿ ಪಡಿಸಿಕೊಂಡ ಜಾಕೇಟನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಜಾಕೇಟನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾಲು-7 ಎಂದು ಗುರುತಿಸಲಾಯಿತು.

8. ನಂತರ 3 ನೇ ಆರೋಪಿ ನಮ್ಮನ್ನು ಮತ್ತು ಪೊಲೀಸರನ್ನು ಅದೇ ಗ್ರಾಮದಲ್ಲಿರುವ ಅವರ ಮನೆಗೆ ಕರೆದುಕೊಂಡು ಹೋಗಿ ಮನೆಯಲ್ಲಿ ಇಟ್ಟಿದ್ದ ಒಂದು ಪ್ಯಾಂಟನ್ನು ತಂದು

ಹಾಜರುಪಡಿಸಿದ್ದು ಅದನ್ನು ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-22 ಎಂದು, ಸಾಕ್ಷಿ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಎರಡು ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಶಾನೆ ಪಿ-23 ಎಂದು ಗುರುತಿಸಲಾಯಿತು. ನಿಪಿ-22 ರಡಿಯಲ್ಲಿ ಜಪ್ತಿ ಪಡಿಸಿಕೊಂಡ ಪ್ಯಾಂಟನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಪ್ಯಾಂಟನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾಲು-8 ಎಂದು ಗುರುತಿಸಲಾಯಿತು.

9. ನಂತರ ಆರೋಪಿತರೆಲ್ಲರೂ ನಮ್ಮನ್ನು ಮತ್ತು ಪೊಲೀಸರನ್ನು ಅದೇ ಗ್ರಾಮದಲ್ಲಿರುವ ಶಾಂತಪ್ಪ ರವರ ಮನೆಗೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಶಾಂತಪ್ಪ ರವರನ್ನು ಕೊಲೆ ಮಾಡಿದ ಸ್ಥಳ ಎಂದು ತೋರಿಸಿದ್ದು ಸದರಿ ಸ್ಥಳದಲ್ಲಿ ಪೊಲೀಸರು ನಮ್ಮ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-24 ಎಂದು, ಸಾಕ್ಷಿ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಎರಡು ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಒಟ್ಟಾಗಿ ನಿಶಾನೆ ಪಿ-25 ಎಂದು ಗುರುತಿಸಲಾಯಿತು.

10. ನಂತರ ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ಆಲಮಟ್ಟಿ ಬ್ರಿಡ್ಜ ಗೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಶಾಂತಪ್ಪನ ಮೃತದೇಹವನ್ನು ನದಿಗೆ ಎಸೆದ ಸ್ಥಳ ಎಂದು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು ನಮ್ಮ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಪಂಚನಾಮೆ

ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-26 ಎಂದು, ಸಾಕ್ಷಿ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಎರಡು ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಶಾನೆ ಪಿ-27 ಎಂದು ಗುರುತಿಸಲಾಯಿತು. ನಿಪಿ-26 ಪಂಚನಾಮೆಯನ್ನು ಹುನಗುಂದ ಕಡೆ ಹೋಗುವ ರಸ್ತೆಯ ಎಡಭಾಗಕ್ಕೆ ಬರುತ್ತದೆ. ಸದರಿ ಸ್ಥಳ ಪಂಚನಾಮೆ ಕಾಲಕ್ಕೆ ಬಲಭಾಗದ ಬ್ರಿಡ್ಜನ ಬಳಿ ಹೆಚ್ಚಾಗಿ ವಾಹನಗಳ ಸಂಚಾರ ಇದ್ದ ಕಾರಣದಿಂದ ಯು-ಟರ್ನ ಮಾಡಿಕೊಂಡು ಬಂದು ಎಡಭಾಗದ ಬ್ರಿಡ್ಜ ಬಳಿ ವಾಹನ ನಿಲ್ಲಿಸಿ ಮೃತ ದೇಹವನ್ನು ಎಸೆದಿರುತ್ತಾರೆ ಎಂದು ಆರೋಪಿತರು ಪಂಚನಾಮೆ ಕಾಲಕ್ಕೆ ತಿಳಿಸಿರುತ್ತಾರೆ. ಬೆಳಿಗ್ಗೆ ಸುಮಾರು 6-30 ರಿಂದ ಮಧ್ಯಾಹ್ನ 3-30 ಗಂಟೆಯವರೆಗೆ ಮೇಲೆ ಹೇಳಿದ ಸ್ಥಳಗಳಲ್ಲಿ ವಿವಿಧ ಪಂಚನಾಮೆಗಳನ್ನು ಜರುಗಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರೆ ನಮಗೆ ಪಂಚನಾಮೆ ಕಾಲದಲ್ಲಿ ಹಾಜರಿದ್ದು, ಸ್ಥಗಳನ್ನು ತೋರಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎ ಬಿ ಜೆ **ವಕೀಲರಿಂದ ಆರೋಪಿ**ತರ **ಪರ**

ಚಾಸಾ-1 ನಮಗೆ ಸಂಬಂಧಿಕರಾಗಬೇಕು ಎಂದರೆ ಸರಿ. ನಮ್ಮ ಗ್ರಾಮ ಮಹಾಂತಪುರದಲ್ಲಿ ಸುಮಾರು 70 ರಿಂದ 80 ಮನೆಗಳು ಇರುತ್ತವೆ. 5 ನೇ ಆರೋಪಿ ಹಾಜರುಪಡಿಸಿದ ಪ್ಯಾಂಟ ಮತ್ತು ಶರ್ಟ ಯಾವ ಬಣ್ಣದ್ದಾಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ಶರ್ಟ ಮತ್ತು ಪ್ಯಾಂಟ ಹಾಜರುಪಡಿಸುವ ಕಾಲದಲ್ಲಿ 5 ನೇ ಆರೋಪಿ ಮನೆಯಲ್ಲಿ ಯಾರು ಯಾರು ಇದ್ದರು ಮತ್ತು ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ಬಟ್ಟೆಗಳನ್ನು ಹಾಜರುಪಡಿಸುವ ಕಾಲದಲ್ಲಿ 2 ನೇ ಆರೋಪಿ ಬಿಟ್ಟು ಉಳಿದ ಆರೋಪಿತರು ಸ್ಥಳದಲ್ಲಿಯೆ ಇದ್ದರು. ಪೊಲೀಸರು 5 ನೇ ಆರೋಪಿಯ ಮನೆಯಲ್ಲಿ ಬೇರೆ ಯಾವುದೇ ವ್ಯಕ್ತಿಗಳನ್ನು ವಿಚಾರಣೆ ಮಾಡಿ, ಅವರ ಹೇಳಿಕೆ ಪಡೆದುಕೊಂಡಿರುವುದಿಲ್ಲ.

2. ಗೋಪಶಾನಿ ಹಳ್ಳದ ಹತ್ತಿರ ಹೋದಾಗ ಸದರಿ ಹಳ್ಳದಲ್ಲಿ ನೀರು ತುಂಬಿತ್ತು ಎಂದರೆ ಸರಿ. ಸದರಿ ಹಳ್ಳದ ಬಳಿ ಹೋದಾಗ ಮಳೆ ಬರುತ್ತಿತ್ತು ಎಂದರೆ ಸರಿಯಲ್ಲ. ಕಟ್ಟಿಗೆಯ ವಸ್ತುಗಳು ನೀರಲ್ಲಿ ಸುಮಾರು 7-8 ದಿನಗಳ ಕಾಲ ಸತತವಾಗಿ ಇದ್ದಲ್ಲಿ ಅದು ಹಾಳಾಗುತ್ತದೆ ಮತ್ತು ಕಬ್ಬಿಣದ ವಸ್ತುಗಳು ತುಕ್ಕು ಹಿಡಿಯುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ಹಾಜರುಪಡಿಸಿದ ಕೊಡಲಿ ಹಳ್ಳದ ನೀರನಲ್ಲಿ ಇದ್ದು ಅದನ್ನು 1 ನೇ ಆರೋಪಿಯೆ ತೆಗೆದು ಹಾಜರುಪಡಿಸಿರುತ್ತಾನೆ. ಪಂಚನಾಮೆ ಕಾಲದಲ್ಲಿ ಸ್ಥಳದ ಚಕ್ಕುಬಂದಿಯನ್ನು ಬರೆಯಲಾಗಿದೆಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ.

3. ಮು ಮಾಲು-3/ಕೊಡಲಿಯ ಮೇಲೆ ಯಾವುದೇ ಮಣ್ಣಿನ ಕಲೆ ಮತ್ತು ತುಕ್ಕು ಹಿಡಿದಿರುವ ಕಲೆಗಳು ಕಂಡುಬರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಮು ಮಾಲು-3 ನಂತಿರುವ ಕೊಡಲಿ ಮನೆಗಳಲ್ಲಿ ಸಿಗುತ್ತವೆ ಎಂದರೆ ಸರಿ. ಗೋಪಶಾನಿ ಹಳ್ಳದಲ್ಲಿ ಮಣ್ಣು ಇರುತ್ತದೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಎಷ್ಟು ಗಂಟೆಗೆ ಬರೆಯಲಾಯಿತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ.

4. ತೊಂಡಿಹಾಳ ಬ್ರಿಡ್ಜನ ಜರುಗಿಸಲಾದ ಪಂಚನಾಮೆಯಲ್ಲಿ ಸಿಮ್ ನಂಬರ ಬರೆಯಲಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯಲ್ಲಿ ಚಕ್ಕುಬಂದಿಯನ್ನು ಬರೆಯಲಾಗಿದೆಯೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ಎಷ್ಟು ಗಂಟೆಗೆ ಬರೆಯಲಾಗಿದೆ ಎಂದು ನನಗೆ ಈಗ ಹೇಳಲಾಗುವುದಿಲ್ಲ.

5. ಪೊಲೀಸರು ನಮ್ಮ ಗ್ರಾಮಕ್ಕೆ ಬೆಳಿಗ್ಗೆ 6-30 ಗಂಟೆಗೆ ಬಂದಾಗ ಎಷ್ಟು ಜನ ಸೇರಿದ್ದೆವು ಮತ್ತು ಎಷ್ಟು ಜನ ಪೊಲೀಸರು ಬಂದಿದ್ದರು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಆರೋಪಿತರು ಎಷ್ಟು ದಿನಗಳ ಕಾಲ ಠಾಣೆಯಲ್ಲಿದ್ದರು ಎಂದು ನನಗೆ ಗೊತ್ತಿಲ್ಲ.

6. ಶಿವಕುಮಾರ ರವರ ಮನೆಯ ಬಳಿ ಕರೆದುಕೊಂಡು ಹೋಗಿ ಒಮಿನಿ ವಾಹನವನ್ನು ತೋರಿಸಿದಾಗ ಸಮಯ ಎಷ್ಟು ಗಂಟೆಯಾಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ಸ್ಥಳದ ಚಕ್ಕುಬಂದಿಯನ್ನು ಸಹ ನನಗೆ ಹೇಳಲು ಆಗುವುದಿಲ್ಲ. ಮು ಮಾಲು-4 ಸೌಂಡ ಬಾಕ್ಸನ ಮೇಲೆ ರಕ್ತದ ಕಲೆ ಇದ್ದ ಬಗ್ಗೆ ಪೊಲೀಸರು ಸ್ಥಳ ಪಂಚನಾಮೆ ಕಾಲದಲ್ಲಿ ತೋರಿಸಿರುತ್ತಾರೆ. ಸದರಿ ಒಮಿನಿ ಕಾರಿನ ಮಾಲೀಕ ಮತ್ತು ಶಿವಕುಮಾರ ಎನ್ನುವವರನ್ನು ಪೊಲೀಸರು ವಿಚಾರಿಸಿರುವುದಿಲ್ಲ.

7. ಯಲ್ಲವ್ವ ಮಾದರ ರವರ ಮನೆಯ ಬಳಿ ಎಷ್ಟು ಗಂಟೆಗೆ ಪಂಚನಾಮೆ ಜರುಗಿಸಲಾಯಿತು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಮು ಮಾಲು-7 ಜಾಕೇಟ ಯಾವ ಬಣ್ಣದ್ದಾಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ.

8. 1 ನೇ ಆರೋಪಿಯ ಮನೆ ಅಕ್ಕಪಕ್ಕದಲ್ಲಿ ಮನೆಗಳು ಬರುತ್ತವೆ ಎಂದರೆ ಸರಿ. ಶಾಂತಪ್ಪ ಎನ್ನುವವರ ಮನೆಯಲ್ಲಿ ಪಂಚನಾಮೆ ಜರುಗಿಸಿದ ಸಮಯದಲ್ಲಿ ಅವರ ಮನೆಯಲ್ಲಿ ಯಾರಿದ್ದರು ಮತ್ತು ಎಷ್ಟು ಗಂಟೆಗೆ ಪಂಚನಾಮೆ ಜರುಗಿಸಲಾಯಿತು ಎಂದು ನನಗೆ ಗೊತ್ತಿಲ್ಲ.

9. ನಿಂಗಪ್ಪ ಎನ್ನುವವರ ಮನೆಯಲ್ಲಿ ಪಂಚನಾಮೆ ಜರುಗಿಸಿದ ಸಮಯದಲ್ಲಿ ಮನೆಯಲ್ಲಿ ಯಾರು ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. 3 ನೇ ಆರೋಪಿ/ನಿಂಗಪ್ಪ ಎನ್ನುವವರನ್ನು ಪೊಲೀಸರು ನನ್ನ ಸಮಕ್ಷಮ ವಿಚಾರಣೆ ಮಾಡಿರುವುದಿಲ್ಲ. ಆರೋಪಿ ಕಡೆಯಿಂದ ಜಪ್ತಿ ಪಡಿಸಿಕೊಂಡ ಪ್ಯಾಂಟ ಯಾವ ಬಣ್ಣದ್ದಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಪ್ತಿ ಪಂಚನಾಮೆಯನ್ನು ಎಷ್ಟು ಗಂಟೆಗೆ ಜರುಗಿಸಲಾಯಿತು ಎಂದು ನನಗೆ ಗೊತ್ತಿಲ್ಲ.

10. ಆಲಮಟ್ಟಿ ಬ್ರಿಡ್ಜ ಬಳಿ ರಸ್ತೆಯ ಎರಡೂ ಪಥದಲ್ಲಿ ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿ. ಸದರಿ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಪಂಚನಾಮೆಗಳನ್ನು ಪೊಲೀಸರು ಬರೆದಿರುತ್ತಾರೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಮತ್ತು ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾಲು-3 ರಿಂದ 8 ವಸ್ಸುಗಳನ್ನು ಮತ್ತು ಪಂಚನಾಮೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.